# ಪ್ರಜ್ಞೆಯ ವಿಕಸನದ ಚಿತ್ರಗಳು

ನಮ್ಮ ಪುರಾಣಗಳಲ್ಲಿ ಬರುವ ಭಗವದವತಾರಗಳ ಕಥೆಗಳನ್ನು ಮನುಷ್ಯ ಪ್ರಜ್ಞೆಯ ವಿಕಸನದ ಚಿತ್ರಗಳೆಂದು ನೋಡಬಹುದು. ಪ್ರಸಿದ್ಧವಾದ ದಶಾವತಾರಗಳ ಸಂದರ್ಭವನ್ನು ನೋಡುವುದಾದರೆ, ಪೂರ್ಣಪ್ರಮಾಣದ ಮಾನುಷಾವತಾರಗಳು ಪರಶುರಾಮಾವತಾರದಿಂದ ಮೊದಲಾಗಿವೆ.

ಪರಶುರಾಮನು ಒಂದು ಆವೇಶಕ್ಕೆ ಒಳಗಾದವನು. ಕ್ಷತ್ರಿಯರು ಎಂದರೆ ಆಳುವವರು ದುಷ್ಟರಾದರು; ಲೋಕಪೀಡಕರಾದರು. ಇಂಥ ಸಂದರ್ಭದಲ್ಲಿ ಕ್ಷತ್ರಿಯರ ವಿರುದ್ಧವೇ ತಿರುಗಿಬಿದ್ದು ದುಷ್ಟದಮನ ಮಾಡಿ ಲೋಕವನ್ನು ಒಂದು ಸಮಸ್ಥಿತಿಗೆ ತರುವ ಪ್ರಯೋಗ ಮಾಡಿದ ಕಥೆಯೇ ಕೊಡಲಿರಾಮನ ಚರಿತ್ರೆ. ಇಪ್ಪತ್ತೊಂದು ಬಾರಿ ಕ್ಷತ್ರಿಯ ದುಷ್ಟರ ಸಂಹಾರಮಾಡಿದನಂತೆ. ಕ್ಷತ್ರಿಯರ ನೆತ್ತರಿನಿಂದಲೇ ಸರೋವರಗಳು ತುಂಬಿಬಿಟ್ಟವಂತೆ!

ಇದೊಂದು ತೀವ್ರಸ್ವರೂಪದ ಪ್ರತಿಕ್ರಿಯೆಯಾಯಿತು. ನೀರು– ನೆತ್ತರುಗಳ ಭೇದ ಅಳಿಯುವಂತೆ ಮಾಡಿದ ಪ್ರಯೋಗ ಜೀವಸಮ್ಮತವಾಗುವುದು ಹೇಗೆ? ದುಷ್ಟದಮನವೇನೋ ಮಾಡಬೇಕಾದುದೇ. ಆದರೆ ಅದುವೇ ಒಂದು ವ್ಯಸನವಾದರೆ ವ್ಯಸನವೇ ಒಂದು ಸಮಸ್ಯೆಯಲ್ಲವೆ?

ಇದನ್ನು ಸೂಚಿಸಲೋ ಎಂಬಂತೆ ಪರಶುರಾಮನ ಕಾಲದಲ್ಲಿಯೇ ದೇವರು ದಶರಥನ ಮಗನಾಗಿ ಅಂದರೆ ಕ್ಷತ್ರಿಯಕುಮಾರನಾಗಿಯೇ ಅವತರಿಸಬೇಕಾಯಿತು. ಇದು ಏನನ್ನು ಸೂಚಿಸುತ್ತದೆ?

ಪರಶುರಾಮನ ಪ್ರಯೋಗವು ಸ್ವ–ವಿರೋಧಗಳಿಂದ ಕೂಡಿತ್ತು ಎಂಬುದನ್ನೆ? ಅಥವಾ ಇನ್ನೊಂದು ಹೊಸತೇ ಆದ ಪ್ರಯೋಗಕ್ಕೆ ನಮ್ಮ ಪ್ರಜ್ಞಾರಂಗವು ಸಜ್ಜುಗೊಳ್ಳಬೇಕಾಗಿದೆ ಎಂಬುದನ್ನೇ? 'ಕೊಡಲಿರಾಮನು ಎರೆದ ಕೆನ್ನೀರ ಜಳಕಕ್ಕೆ ಕೂದಲು ನೆನೆಯಲಿಲ್ಲ' ಎನ್ನುವ ಈ ಭೂಮಿತಾಯಿಗೆ ಅವಳ ಸಂವೇದನೆಯಲ್ಲಿಯೇ ಹೊಸ ಸಂಚಲನ ಮೂಡಿಸಲು ಈ ಎಲ್ಲದಕ್ಕಿಂತ ಬೇರೆಯೇ ಆದ ಪ್ರಯೋಗವೊಂದು ಅನಿವಾರ್ಯವೆಂಬುದನ್ನೆ?

ಹೌದೆನ್ನಿಸುತ್ತದೆ.

ಪರಶುರಾಮನದು ಒಂದು 'ಆವೇಶ'. ಆವೇಶದ ಪ್ರಜ್ಞಾಸ್ಥಿತಿ. ಆವೇಶದಲ್ಲಿ ಅದ್ಭುತರಸ!

ಆವೇಶವು 'ಸ್ವ–ಪ್ರಜ್ಞೆ'ಯ ಪೂರ್ವಸ್ಥಿತಿ. ಸ್ವ–ಪ್ರಜ್ಞೆಯು ನಾಗರಿಕತೆಯ ಸ್ಥಿತಿ ಎಂದು ತಿಳಿದುಕೊಳ್ಳುವೆವಾದರೆ, ಆವೇಶವು ನಾಗರಿಕತೆಯ ಪೂರ್ವಸ್ಥಿತಿ.

ಆದುದರಿಂದಲೇ ಮುಂದಿನ ಅವತಾರವಾದ ರಾಮಾವತಾರ ನಾಗರಿಕತೆಯು ಆರಾಧಿಸುವ ಅವತಾರವಾಗಿದೆ. ದುಷ್ಟದಮನ; ರಾಮಾವತಾರದಲ್ಲಿ ಇದೆ ಏನೋ ನಿಜ. ಆದರೆ ಅದಕ್ಕಿಂತಲೂ ಮುಖ್ಯವಾಗಿ, 'ಲೋಕ–ಸಂಗ್ರಹ' ರಾಮಾವತಾರದ ಮೌಲ್ಯವಾಗಿದೆ. ಲೋಕ–ಸಂಗ್ರಹವು ನಾಗರಿಕ ಮೌಲ್ಯ.

ನಾಗರಿಕತೆಯ ಪ್ರಜ್ಞೆಯ ಸ್ಥಿತಿಯನ್ನು ನೋಡಿದರೆ, ಅದು ಸ್ವ–ನಿಯಂತ್ರಣ ಮಾಡಿಕೊಳ್ಳುತ್ತ, ಆಂತರಿಕವಾಗಿ ಸರಿದೂಗಿಸಿಕೊಳ್ಳುತ್ತ, ಆವೇಶಕ್ಕೆ ಎಡೆಕೊಡದೆ ಜಾಗರೂಕವಾಗಿರುತ್ತ, ಪ್ರಕೃತಿ ಸಹಜವಾಗಿ ಕೆಲವೊಮ್ಮೆ ಆವೇಶವಶವಾದರೂ ಆಗ ಸ್ವ–ಪ್ರಜ್ಞೆಯನ್ನು ಕಳೆದುಕೊಳ್ಳದಂತೆ ಸಾಂತ್ವನವನ್ನು ಹೇಳುವ ಲಕ್ಷ್ಮಣನಂಥ ಆಪ್ತ ಪಾತ್ರವೊಂದು ಬಳಿಯಲ್ಲೆ ಇರುತ್ತ ಪಕ್ವಗೊಳ್ಳುವ ಪ್ರಜ್ಞೆಯ ಸ್ಥಿತಿ. ಆದುದರಿಂದಲೇ ಕರುಣ ಮತ್ತು ವೀರರಸಗಳು ರಾಮಾಯಣದ ಪ್ರಧಾನ ರಸಗಳು.

ತಾನು ಮನುಷ್ಯ; ತಾನು ರಾಮ; ತಾನು ದಶರಥನ ಮಗ– 'ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ'– ಎಂದು ಇಂದ್ರಾದಿ ದೇವತೆಗಳೊಡನೆ ರಾಮನಾಡುವ ಮಾತು, ಸ್ವ–ಪ್ರಜ್ಞೆಯನ್ನು ಕಳೆದುಕೊಳ್ಳದ, ಆವೇಶದ ಸ್ಥಿತಿಯಿಂದ ನಾಗರಿಕತೆಯ ಸ್ಥಿತಿಯತ್ತ ಸಾಗುತ್ತಿರುವ ಸೂಚಕವಾದ ಮಾತು.

ಪರಶುರಾಮನಿಂದ ಭಿನ್ನವಾಗಿ ರಾಮಾವತಾರದಲ್ಲಿ ನಡೆದ ಪ್ರಯೋಗವೇನೆಂದರೆ– ತನ್ನ ತಪ್ಪೇ ಇಲ್ಲದೆ; ಗದ್ದುಗೆ ಏರುವ ಹೊತ್ತಿನಲ್ಲಿ ಕಾಡಿಗೆ ನಡೆಯಬೇಕಾಗಿ ಬಂದಾಗ ಅದನ್ನೊಪ್ಪಿ ಅದರಂತೆ ನಡೆದುದು. ಹದಿನಾಲ್ಕು ವರ್ಷಗಳ ವನವಾಸವೆಂದರೆ ಯಾವಜ್ಜೀವ ವನವಾಸವೆಂದೇ ಇಂಗಿತ. ಆದರೂ ತನ್ನ ಯಾವ ತಪ್ಪಿಗಾಗಿ ತಾನು ಕಾಡಿಗೆ ನಡೆಯಬೇಕು ಎಂದು ಯಾರೇ ಆದರೂ ಕೇಳಬಹುದಾಗಿದ್ದ, ಲಕ್ಷ್ಮಣನ ಪ್ರಕಾರ ಕೇಳಲೇಬೇಕಾಗಿದ್ದ, ಪ್ರಶ್ನೆಯನ್ನು ರಾಮ ಕೇಳಲಿಲ್ಲ.

ಈ ಪ್ರಶ್ನೆಗೆ ಉತ್ತರವಿಲ್ಲ ಎಂದು ಅವನಿಗೆ ತಿಳಿದಿತ್ತು. ಉತ್ತರವಿಲ್ಲದ ಪ್ರಶ್ನೆಯನ್ನು ಎತ್ತಬಾರದೆಂದೂ ತಿಳಿದಿತ್ತು. ಅಂದರೆ ಆವೇಶಕ್ಕೆ ಒಳಗಾಗುವ ಸಂದರ್ಭದಲ್ಲಿ ಆವೇಶಕ್ಕೆ ಒಳಗಾಗದೆ ಸಂಯಮದಿಂದ ಕಷ್ಟಗಳನ್ನು ತನ್ನ ಮೇಲೇ ಹೇರಿಕೊಂಡ. ಸಂಯಮವು ನಾಗರಿಕ ಮೌಲ್ಯ.

ಮುಂದಿನ ಅವತಾರವು ಪೂರ್ಣಾವತಾರ ಎಂದು ಪ್ರಸಿದ್ಧವಾದ ಕೃಷ್ಣಾವತಾರ. ಪೂರ್ಣಾವತಾರವೆನ್ನುವ ಇಂಗಿತವೇನೆಂದರೆ– ಆವೇಶದಿಂದ ಸ್ವ–ಪ್ರಜ್ಞೆಯ ಸ್ಥಿತಿಗೆ ಬಂದು, ಸ್ವ–ಪ್ರಜ್ಞೆಯ ಸ್ಥಿತಿಯನ್ನೂ ದಾಟಿದ ಮುಕ್ತಪ್ರಜ್ಞೆಯ ಸ್ಥಿತಿ ಎಂದು. ವಿಶೇಷವೆಂದರೆ ಮುಕ್ತ ಪ್ರಜ್ಞೆಯು, ಕಾಲ–ದೇಶಗಳೆಂಬ ಉಪಾಧಿಗಳಿಂದಲೂ ಮುಕ್ತತೆಯಾಗಿದೆ. ಆದುದರಿಂದ, ಮನುಷ್ಯರನ್ನು ಕಾಲ–ದೇಶಬದ್ಧರನ್ನಾಗಿ ಮಾತ್ರ ನೋಡುವ ಪರಿಕಲ್ಪನೆಯನ್ನೇ ಮುಕ್ತಪ್ರಜ್ಞೆಯು ಗೇಲಿಮಾಡಿದರೂ ಮಾಡಿತೇ!

'ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ'– ಇದು ಕೃಷ್ಣನ ಮಾತು! ಮನುಷ್ಯರಂತೆ, ಮಾನವ ದೇಹದಲ್ಲಿ ತಾನು ಕಾಣಿಸುತ್ತಿರುವುದರಿಂದ, ತನ್ನನ್ನು ಮನುಷ್ಯಮಾತ್ರನೆಂದು ತಿಳಿದವರು ಬುದ್ಧಿಗೇಡಿಗಳು– ಇದು ಈ ಮಾತಿನರ್ಥ.

ನಾನು ಮನುಷ್ಯ, ನಾನು ರಾಮ; ದಶರಥನ ಮಗ– ಇದು ರಾಮನ ಮಾತು. ನನ್ನನ್ನು ಮನುಷ್ಯನೆಂದು ತಿಳಿಯುವ ತಿಳುವಳಿಕೆಯೇ ತಪ್ಪು ತಿಳುವಳಿಕೆ–ಇದು ಕೃಷ್ಣನ ಮಾತು.

ರಾಮನದು ಸ್ವ–ಪ್ರಜ್ಞೆಯ ಮಾತು.

ಕೃಷ್ಣನದು ಮುಕ್ತ–ಪ್ರಜ್ಞೆಯ ಮಾತು. ಸ್ವ–ಪ್ರಜ್ಞೆಯ ಹಂಗಿಲ್ಲದ ಮಾತು.

ಈ ಎರಡು ಮಾತುಗಳು ಅವತಾರಗಳಲ್ಲಿನ ಪ್ರಜ್ಞಾವಿಕಾಸದ ಚಿತ್ರವನ್ನು ಕಾಣಿಸುತ್ತವೆ.

ಪೂರ್ಣಾವತಾರವಾದ ಕೃಷ್ಣನ ಅನಂತರ ಬುದ್ಧ ಕಾಣಿಸಿಕೊಂಡುದರಿಂದ, ಬುದ್ಧ ಯಾವುದನ್ನೂ ಒಪ್ಪದೆ, ಎಲ್ಲವನ್ನೂ ಇನ್ನೊಮ್ಮೆ ಮೊದಲಿನಿಂದ ಪ್ರಾರಂಭ ಮಾಡಬೇಕಾಯಿತು.

■ ತೋಷ

## ಮಾತೇ ಮುತ್ತು

★ ಯಶಸ್ಸು ಅತ್ಯಂತ ಕೆಟ್ಟ ಶಿಕ್ಷಕ. ಅದು ಬುದ್ಧಿವಂತರಿಗೂ ನಾನು ಸೋಲಲಾರೆ ಎಂಬ ಭ್ರಮೆ ಹುಟ್ಟಿಸುತ್ತದೆ.
–ಬಿಲ್ ಗೇಟ್ಸ್

★ ಧರ್ಮಗಳು ಯಾವತ್ತೂ ವಿಭಜಿಸುವ ಗುರಿ ಹೊಂದಿಲ್ಲ. ಎಲ್ಲ ನೈಜ ಧರ್ಮಗಳೂ ಮೂಲದಲ್ಲಿ ಏಕತೆಯನ್ನು ಹೊಂದಿವೆ.
–ಲಾಲ್‌ಬಹಾದ್ದೂರ ಶಾಸ್ತ್ರಿ

★ ಸೌಂದರ್ಯ ಮುಖದಲ್ಲಿಲ್ಲ. ಅದು ಹೃದಯದಲ್ಲಿರುವ ಬೆಳಕು.
–ಖಲೀಲ್ ಗಿಬ್ರಾನ್

★ ಒಬ್ಬ ವ್ಯಕ್ತಿಗೆ ಆತ ನಂಬಿಕೊಂಡ ಜೀವಿಸುವ ಹಕ್ಕನ್ನು ನಿರಾಕರಿಸಿದರೆ ಆತ ಕಾನೂನುವಿರೋಧಿ ಆಗದೆ ಬೇರೆ ದಾರಿಯಿಲ್ಲ.
–ನೆಲ್ಸನ್ ಮಂಡೇಲಾ

★ ಅತ್ಯಂತ ಕಡಿಮೆ ವಸ್ತುಗಳೊಂದಿಗೆ ಜೀವಿಸುವುದೇ ಅತ್ಯಂತ ಶ್ರೇಷ್ಠ ಸಂಪತ್ತು.
–ಪ್ಲೇಟೋ

★ ನಿಮ್ಮ ಕಲಿಕೆಯ ಮಿತಿಯನ್ನು ಮಕ್ಕಳ ಮೇಲೆ ಹೇರಬೇಡಿ. ಅವರು ಹುಟ್ಟಿದ್ದೇ ಬೇರೆ ಕಾಲದಲ್ಲಿ.
–ರವೀಂದ್ರನಾಥ ಠಾಗೋರ್

★ ಹೇಳಿದರೆ ಮರೆತು ಬಿಡುತ್ತೇನೆ, ತೋರಿಸಿದರೆ ನೆನಪಿಟ್ಟುಕೊಳ್ಳಬಹುದು. ಆದರೆ ನನ್ನನ್ನೂ ನಿಮ್ಮ ಜತೆಗೆ ಸೇರಿಸಿಕೊಂಡರೆ ಅರ್ಥ ಮಾಡಿಕೊಳ್ಳುತ್ತೇನೆ.
–ಜಪಾನಿ ನಾಣ್ನುಡಿ

★ ಜನ ನಿಮ್ಮ ಗುರಿಯತ್ತ ನೋಡಿ ನಗದಿದ್ದರೆ, ನಿಮ್ಮ ಗುರಿ ತುಂಬ ಸಣ್ಣದಿದೆಯೆಂದೇ ಅರ್ಥ.
–ಅಜೀಮ್ ಪ್ರೇಮ್‌ಜಿ

★ ಶಬ್ದಗಳು ಸತ್ಯ ಮತ್ತು ಕರುಣಾಮಯಿ ಆಗಿದ್ದರೆ ಅವು ಖಂಡಿತವಾಗಿಯೂ ಜಗತ್ತನ್ನು ಬದಲಾಯಿಸಬಲ್ಲವು.
–ಗೌತಮ ಬುದ್ಧ